ಪ್ರಧಾನ ಸಿವಿಲ್ ನ್ಯಾಯಾಧೀಶರು ಹಾಗೂ ಜೆ.ಎಂ.ಎಫ್.ಸಿ ನ್ಯಾಯಾಲಯ,
ಕಡೂರು .
ಉಪಸ್ಥಿತರು :
ಶ್ರೀಮತಿ ನಳಿನ ಎಸ್.ಸಿ., ಬಿ.ಎ ಎಲ್.ಎಲ್.ಬಿ.,

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ., ಕಡೂರು

ಕ್ರಿಮಿನಲ್ ಪ್ರಕರಣ ಸಂಖ್ಯೆ:**4523/2024**

ಪಿರ್ಯಾದುದಾರರು : ಶ್ರೀಮತಿ ಮೇಘನಾ

ವಿರುದ್ಧ

ಆರೋಪಿ- : ಬಿ.ಅಶೋಕ

<u>ಕಲಂ-**313** ದಂಡ ಪ್ರಕ್ರಿಯಾ ಸಂಹಿತೆ ಅಡಿ ಆರೋಪಿತನ ಹೇಳಿಕೆ</u>

ಪ್ರಶ್ನೆ-1-ಆರೋಪಿಯಾದ ನೀವು ನಿಮ್ಮ ವಿರುದ್ದ ಸಾಕ್ಷಿದಾರರು ನೀಡಿರುವ ಸಾಕ್ಷ್ಯವನ್ನು ತಿಳಿದುಕೊಂಡಿದ್ದೀರಾ ?

ಆರೋಪಿ ಉತ್ತರ -

ಪ್ರಶ್ನೆ-2 -ಫ್ರಾಸಾ-1 ದೂರುದಾರರು ತಮ್ಮ ಸಾಕ್ಷ್ಯದಲ್ಲಿ ಆರೋಪಿಯಾದ ನೀವು ಪಿರ್ಯಾದುದಾರರಿಂದ ಬುಕ್ ಸ್ಟಾಲ್ ವ್ಯಾಪಾರದ ಉದ್ದೇಶಕ್ಕಾಗಿ ರೂ.1,50,000/- ಹಣವನ್ನು ಸೆಕ್ಯುರಿಟಿ ಸಾಲವಾಗಿ ಜಂಟಿ ಸಾಲ ಖಾತೆ ನಂ.198 ರಡಿ ಪಡೆದಿದ್ದು, ಸದರಿ ಹಣವನ್ನು 24 ತಿಂಗಳೊಳಗಾಗಿ ಬಡಿಯೊಂದಿಗೆ ವಾಪಸ್ಸು ಮಾಡುವುದಾಗಿ ಒಪ್ಪಿಕೊಂಡಿರುತ್ತೀರಿ ಎಂದು ಸಾಕ್ಷಿ ನುಡಿದಿದ್ದು, ಈ ಬಗ್ಗೆ ನೀವು ಏನು ಹೇಳುವಿರಿ ?

ಆರೋಪಿ ಉತ್ತರ- ಹೌದು

ಪ್ರಶ್ನೆ-3 - ಫ್ರಾಸಾ-1 ತಮ್ಮ ಸಾಕ್ಷ್ಯದಲ್ಲಿ ಆದರೆ ಸದರಿ ಸಾಲವನ್ನು ನಿಗದಿತ ಅವಧಿಯಲ್ಲಿ ಪಾವತಿಸದೇ ರೂ.2,11,059-00 ಬಾಕಿ ಉಳಿದಿದ್ದು, ಆ ಬಗ್ಗೆ ನಿಮ್ಮನ್ನು ಒತ್ತಾಯಿಸಲಾಗಿ ನೀವು ಸದರಿ ಸಾಲದ ಪಾವತಿಗಾಗಿ ನಿಮ್ಮ ಖಾತೆ ಇರುವ ಫೆಡರಲ್ ಬ್ಯಾಂಕ್ ಲಿಮಿಟೆಡ್, ಕಡೂರು ಶಾಖೆಯ ಚೆಕ್ ಸಂಖ್ಯೆ: 076568 ರಲ್ಲಿ ರೂ.2,11,059/-ಹಣವನ್ನು ಮತ್ತು

ದಿನಾಂಕಃ27.09.2024 ನು ನಮೂದಿಸಿ ನಗಧಿಕರಿಸಿಕೊಳ್ಳುವಂತೆ ಪಿರ್ಯಾದಿಗೆ ನೀಡಿರುತ್ತೀರಿ ಎಂದು ನುಡಿದಿದ್ದು, ಈ ಬಗ್ಗೆ ನೀವು ಏನು ಹೇಳುವಿರಿ ?

ಆರೋಪಿ ಉತ್ತರ - ಸುಳ್ಳು

ಪ್ರಶ್ನೆ-4 - ಫ್ರಾಸಾ-1 ತಮ್ಮ ಸಾಕ್ಷ್ಯದಲ್ಲಿ ಆರೋಪಿಯಾದ ನೀವು ನೀಡಿರುವ ಚೆಕ್ಕನ್ನು ಸದರಿ ಚೆಕ್ ಅನ್ನು ನಗದೀಕರಿಸಲು ಪಿರ್ಯಾದಿಯು ಸಿ.ಡಿ.ಸಿ.ಸಿ. ಬ್ಯಾಂಕ್, ಕಡೂರು ಶಾಖೆಗೆ ಹಾಜರುಪಡಿಸಿದಾಗ, ಸದರಿ ಬ್ಯಾಂಕ್ ನವರು **"Funds Insufficient"** ಎಂಬ ಹಿಂಬರಹದೊಂದಿಗೆ ಸದರಿ ಚೆಕ್ಕು ಅಮಾನ್ಯ ಗೊಂಡಿರುತ್ತದೆ ಎಂದು ದಿನಾಂಕ-03.10.2024 ರಂದು ಹಿಂತಿರುಗಿಸಿರುತ್ತಾರೆ ಎಂದು, ಈ ಬಗ್ಗೆ ನೀವೇನು ಹೇಳುವಿರಿ ?

ಆರೋಪಿ ಉತ್ತರ - ಸುಳ್ಳು

ಪ್ರಶ್ನೆ-5 - ಫ್ರಾಸಾ-1 ತಮ್ಮ ಸಾಕ್ಷ್ಯದಲ್ಲಿ ಆರೋಪಿಯಾದ ನಿಮಗೆ ದಿನಾಂಕಃ 14.10.2024 ರಂದು ವಕೀಲರ ಮೂಲಕ ನೋಟಿಸನ್ನು ಕಳುಹಿಸಿದ್ದು, ಸದರಿ ನೋಟೀಸ್ ಆರೋಪಿಗೆ ದಿನಾಂಕ 18.10.2024 ರಂದು ಖುದ್ದು ಜಾರಿಯಾಗಿದ್ದು, ಆರೋಪಿಯಾದ ನೀವು ಇದುವರೆಗೂ ಸಹ ಹಣವನ್ನು ಪಾವತಿಸಿರುವುದಿಲ್ಲ ಮತ್ತು ನೋಟೀಸ್ ಗೆ ಯಾವುದೇ ಪ್ರತ್ಯುತ್ತರವನ್ನು ನೀಡಿರುವುದಿಲ್ಲ ಎಂದು ಸಾಕ್ಷಿ ನುಡಿದಿದ್ದು, ಈ ಬಗ್ಗೆ ನೀವು ಏನು ಹೇಳುವಿರಿ?

ಆರೋಪಿ ಉತ್ತರ - ಸುಳ್ಳು

ಪ್ರಶ್ನೆ-6 - ಫ್ರಾಸಾ-1 ತಮ್ಮ ಸಾಕ್ಷ್ಯದಲ್ಲಿ ಆರೋಪಿಯಾದ ನೀವು ಉದ್ದೇಶ ಪೂರ್ವಕವಾಗಿ ಮೋಸ ಮಾಡುವ ಉದ್ದೇಶದಿಂದ ಫ್ರಾಸಾ-1 ರವರಿಗೆ ನಿಮ್ಮ ಖಾತೆಯಲ್ಲಿ ಸಾಕಷ್ಟು ಹಣವಿಲ್ಲವೆಂಬ ವಿಷಯ ಗೊತ್ತಿದ್ದರೂ ಸಹ ಚೆಕ್ಕನ್ನು ಕೊಟ್ಟು ಬ್ಯಾಂಕಿಗೆ ಹಾಜರುಪಡಿಸುವಂತೆ ತಿಳಿಸಿ ಮೋಸ ಮಾಡಿರುತ್ತೀರಿ ಹಾಗೂ ಕಾನೂನಿಗೆ ವಿರುದ್ಧವಾಗಿ ನಡೆದುಕೊಂಡಿರುತ್ತೀರಿ ಎಂದು ಸಾಕ್ಷಿ ನುಡಿದಿದ್ದು, ಈ ಬಗ್ಗೆ ನೀವೇನು ಹೇಳುವಿರಿ ?

ಆರೋಪಿ ಉತ್ತರ - ಸುಳ್ಳು

ಪ್ರಶ್ನೆ-7 - ನೀವು ಏನಾದರೂ ಹೇಳಲು ಬಯಸುವಿರಾ ?

ಆರೋಪಿ ಉತ್ತರ - ಇಲ್ಲ

ಪ್ರಶ್ನೆ-8 - ನಿಮ್ಮ ಪರವಾಗಿ ಸಾಕ್ಷಿದಾರರ ವಿಚಾರಣೆ ಮಾಡಿಸುತ್ತೀರಾ ?

ಆರೋಪಿ ಉತ್ತರ - ಇದೆ

( ಈ ಮೇಲ್ಕಂಡ ಆರೋಪಿತನ ಹೇಳಿಕೆಯನ್ನು ಅವರಿಗೆ ತಿಳಿಯುವ ಭಾಷೆಯಲ್ಲಿ ಓದಿ, ಹೇಳಿ, ಕೇಳಿ, ಸರಿ ಇದೆ ಎಂದು ನನ್ನ ಸಮಕ್ಷಮ ದಿನಾಂಕಃ 01-06-2026 ರಂದು ಸಹಿ ಮಾಡಿರುತ್ತಾರೆ )

-ಸಹಿ-
**( ನಳಿನ ಎಸ್.ಸಿ. )**
ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆಎಂಎಫ್‌ಸಿ ನ್ಯಾಯಾಲಯ, ಕಡೂರು.

ಆರೋಪಿ ಸಹಿ :